# ಜಿಲ್ಲಾಧಿಕಾರಿಗಳ ಕಾರ್ಯಾಲಯ, ಉತ್ತರ ಕನ್ನಡ, ಕಾರವಾರ – 581 301
## OFFICE OF THE DEPUTY COMMISSIONER, UTTARA KANNADA DISTRICT, KARWAR, -581 301

ದೂರವಾಣಿ : 08382 226406, 226471
Telephone: 08382 226603 (Fax)

Email: dckarwar@gmail.com
Website: http://uttara kannada.nic.in


ನಂ:ಕಂಶಾ/ಸಿಬ್ಬಂದಿ(2)/ವಿವ-60/2018-19

ದಿನಾಂಕ:15-12-2018.

## ಅಧಿಕೃತ ಜ್ಞಾಪನ

**ವಿಷಯ:** ಉತ್ತರ ಕನ್ನಡ ಜಿಲ್ಲೆಯಲ್ಲಿ ಖಾಲಿ ಇರುವ ಗ್ರಾಮ ಲೆಕ್ಕಿಗರ ಹುದ್ದೆಗಳಿಗೆ ನೇರನೇಮಕಾತಿಯಿಂದ ತುಂಬುವ ಕುರಿತು ಅಂತಿಮ ಆಯ್ಕೆ ಪಟ್ಟಿ ಪ್ರಕಟಿಸುವ ಕುರಿತು.

**ಉಲ್ಲೇಖ:**
1) ಈ ಕಾರ್ಯಾಲಯದ ಅಧಿಸೂಚನೆ ಸಮಸಂಖ್ಯೆ ದಿನಾಂಕ17-07-2018.
2) ಈ ಕಾರ್ಯಾಲಯದ ಅಧಿಕೃತ ಜ್ಞಾಪನಾ ಸಮಸಂಖ್ಯೆ ದಿನಾಂಕ 03-09-2018 ಮತ್ತು 12-09-2018
3) ಈ ಕಾರ್ಯಾಲಯದ ಅಧಿಕೃತ ಜ್ಞಾಪನಾ ಸಮಸಂಖ್ಯೆ ದಿನಾಂಕ; 17-10-2018

<<<>>>

ಉತ್ತರ ಕನ್ನಡ ಜಿಲ್ಲೆಯ ಕಂದಾಯ ಇಲಾಖೆಯಲ್ಲಿ ಖಾಲಿ ಇರುವ ಗ್ರಾಮ ಲೆಕ್ಕಿಗರ ಹುದ್ದೆಗಳಿಗೆ ನೇರ ನೇಮಕಾತಿ ಮೂಲಕ ಭರ್ತಿ ಮಾಡಿಕೊಳ್ಳಲು ಆನ್‌ಲೈನ ಮುಖಾಂತರ ಸ್ವೀಕರಿಸಲಾದ ಅರ್ಜಿಗಳನ್ನು ಪರಿಶೀಲಿಸಿ ಉಲ್ಲೇಖ (3) ರಂತೆ ತಾತ್ಕಾಲಿಕ ಆಯ್ಕೆ ಪಟ್ಟಿ ಮತ್ತು ಕಾಯ್ದಿಟ್ಟ ಅಭ್ಯರ್ಥಿಗಳ ಪಟ್ಟಿಯನ್ನು ಪ್ರಕಟಿಸಲಾಗಿತ್ತು. ಸದರಿ ತಾತ್ಕಾಲಿಕ ಆಯ್ಕೆಪಟ್ಟಿ ಮತ್ತು ಕಾಯ್ದಿಟ್ಟ ಅಭ್ಯರ್ಥಿಗಳ ಪಟ್ಟಿಗೆ ದಿನಾಂಕ 02-11-2018 ರೊಳಗೆ ಆಕ್ಷೇಪಣೆಗಳನ್ನು ಸಲ್ಲಿಸಲು ಅವಕಾಶ ಕಲ್ಪಿಸಲಾಗಿತ್ತು.

ಸದರಿ ತಾತ್ಕಾಲಿಕ ಆಯ್ಕೆ ಪಟ್ಟಿಗೆ ಯಾವುದೇ ಆಕ್ಷೇಪಣೆ ಸ್ವೀಕೃತವಾಗಿಲ್ಲ. ಆದರೆ 16 ಅಭ್ಯರ್ಥಿಗಳು ತಮ್ಮ ಮೂಲ ಅಂಕಪಟ್ಟಿಯನ್ನು ಹಾಜರುಪಡಿಸದೇ ಇರುವುದರಿಂದ ಅವರ ಹೆಸರನ್ನು ಹೊರತುಪಡಿಸಿ ಇನ್ನುಳಿದ 12 ಅಭರ್ಥಿಗಳ ಅಂತಿಮ ಆಯ್ಕೆಪಟ್ಟಿಯನ್ನು http://uttarakannada.nic.in ಜಿಲ್ಲಾ ವೈಬ್‌ಸೈಟನಲ್ಲಿ ಪ್ರಚಾರ ಪಡಿಸಲಾಗಿದೆ.

15/12

ಜಿಲ್ಲಾಧಿಕಾರಿಗಳು ಹಾಗೂ ಅಧ್ಯಕ್ಷರು
ಗ್ರಾಮ ಲೆಕ್ಕಿಗರ ನೇರ ನೇಮಕಾತಿ ಪ್ರಾಧಿಕಾರ
ಉತ್ತರ ಕನ್ನಡ ಜಿಲ್ಲೆ ಕಾರವಾರ.

15/12/18

**ಪ್ರತಿ:**
1) ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ ಬೆಂಗಳೂರುರವರಿಗೆ ಮಾಹಿತಿಗಾಗಿ ಆದರಪೂರ್ವಕ ಸಲ್ಲಿಸಿದೆ.
2) ಡಿಸ್ಟ್ರೀಕ್ಟ್ ಇನ್‌ಪೊರಮೆಟಿಕ್ ಅಧಿಕಾರಿ, ಎನ್‌ಐಸಿ ಕಾರವಾರ
   2/- ಲಗ್ತ ಇಟ್ಟ ಅಂತಿಮ ಆಯ್ಕೆ ಪಟ್ಟಿಯನ್ನು ತಕ್ಷಣವೇ ಜಿಲ್ಲಾ ವೆಬ್‌ಸೈಟನಲ್ಲಿ ಪ್ರಚಾರ ಪಡಿಸಲು ಕೋರಿದೆ.
3) ಈ ಕಾರ್ಯಾಲಯದ ಸೂಚನಾ ಫಲಕಕ್ಕೆ.
4) ಮೆಮೋ ಕಡತ/ ಹೆಚ್ಚಿನ ಪ್ರತಿ.

## ಜಿಲ್ಲಾಧಿಕಾರಿಗಳ ಕಾರ್ಯಾಲಯ ಕಂದಾಯ ಇಲಾಖೆ ಉತ್ತರ ಕನ್ನಡ ಜಿಲ್ಲೆ ಕಾರವಾರ

ನಂ:ಕಂಶಾ/ಸಿಬ್ಬಂದಿ (2)/ವಿವ-60/2018-19 ದಿನಾಂಕ:15-12-2018.

### ಗ್ರಾಮಲೆಕ್ಕಿಗರ ನೇರ ನೇಮಕಾತಿ

### ಅಂತಿಮ ಆಯ್ಕೆ ಪಟ್ಟಿ ಪ್ರಕಟಣೆ

ಉತ್ತರ ಕನ್ನಡ ಜಿಲ್ಲೆಯ ಕಂದಾಯ ಇಲಾಖೆಯಲ್ಲಿ ಖಾಲಿ ಇರುವ ಗ್ರಾಮ ಲೆಕ್ಕಿಗರ ಹುದ್ದೆಗೆ ನೇಮಕಾತಿ ಕುರಿತು 1) **ಅಂತಿಮ ಆಯ್ಕೆ ಪಟ್ಟಿ** 2) 2ನೇ ತಾತ್ಕಾಲಿಕ ಆಯ್ಕೆ ಪಟ್ಟಿ ಮತ್ತು 3) ತಿರಸ್ಕೃತ ಪಟ್ಟಿ 4) ಪರಿಶೀಲನಾ ಸಮಯದಲ್ಲಿ ಸಾಮಾನ್ಯ-ಅಂಗವಿಕಲ(ಶ್ರವಣದೋಷ) ಹುದ್ದೆಗೆ ಅರ್ಹ ಅಭ್ಯರ್ಥಿ ಲಭ್ಯವಾಗದೇ ಇದ್ದುದರಿಂದ ಸದರಿ ಮೀಸಲಾತಿಗೆ ಸಂಬಂಧಿಸಿದಂತೆ ಪರಿಶೀಲನಾ ಪಟ್ಟಿಯನ್ನು ಸಿದ್ಧಪಡಿಸಿ ಜಿಲ್ಲಾ ವೈಬ್‌ಸೈಟ http://uttarakannada.nic.in ನಲ್ಲಿ ಪ್ರಚಾರಪಡಿಸಲಾಗಿದೆ. ಸದರಿ ಪಟ್ಟಿಯಿಂದ ಬಾಧಿತರಾದ ಅಭ್ಯರ್ಥಿಗಳು ದಿನಾಂಕ:31-12-2018 ರ ಸಂಜೆ 5-30 ಗಂಟೆಗೆ ಲಿಖಿತ ರೂಪದಲ್ಲಿ ಜಿಲ್ಲಾಧಿಕಾರಿಗಳು ಉತ್ತರ ಕನ್ನಡ ಕಾರವಾರರವರಿಗೆ ಸಲ್ಲಿಸತಕ್ಕದ್ದು. ಇ-ಮೇಲ್ ಮುಖಾಂತರ ಸಲ್ಲಿಸಲಾಗುವ ಆಕ್ಷೇಪಣೆಗಳನ್ನು ಗಣನೆಗೆ ತೆಗೆದುಕೊಳ್ಳಲಾಗದು. ಸಾಮಾನ್ಯ-ಅಂಗವಿಕಲ(ಶ್ರವಣದೋಷ) ಹುದ್ದೆಗೆ ಪರಿಶೀಲನಾ ಪಟ್ಟಿಯಲ್ಲಿಯ ಅಭ್ಯರ್ಥಿಗಳು ದಿನಾಂಕ:02-01-2019 ರಂದು ಬೆಳಿಗ್ಗೆ 10-00 ಗಂಟೆಗೆ ಜಿಲ್ಲಾಧಿಕಾರಿಗಳ ಕಾರ್ಯಾಲಯಕ್ಕೆ ದಾಖಲೆಗಳ ಪರಿಶೀಲನೆ ಹಾಜರಾಗಲು ಸೂಚಿಸಿದೆ.

ಹೆಚ್ಚಿನ ಮಾಹಿತಿಯನ್ನು ಜಿಲ್ಲಾ ವೈಬ್‌ಸೈಟ http://uttarakannada.nic.in ಮೂಲಕ ಪಡೆಯಬಹುದಾಗಿದೆ. ಹಾಗೂ ಕಚೇರಿ ದೂರವಾಣಿ ಸಂಖ್ಯೆ.08382-222072 ನೇದನ್ನು ಸಂಪರ್ಕಿಸಬಹುದಾಗಿದೆ.

15/12

ಜಿಲ್ಲಾಧಿಕಾರಿಗಳು ಮತ್ತು ಅಧ್ಯಕ್ಷರು
ಗ್ರಾಮ ಲೆಕ್ಕಿಗರ ನೇರ ನೇಮಕಾತಿ ಪ್ರಾಧಿಕಾರ
ಉತ್ತರ ಕನ್ನಡ ಜಿಲ್ಲೆ ಕಾರವಾರ.

15/12/18.